O.S.No. 308/2013
PW -1

ದಿನಾಂಕಃ 08-08-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

ಮುಖ್ಯ ಪಾಟೀ ಸವಾಲು - ಶ್ರೀ ಡಿ.ವಿ.ಎಸ್. ಪ್ರತಿವಾದಿ ಪರ ವಕೀಲರಿಂದ

ನನ್ನ ತಾಯಿಗೆ 3 ಜನ ಮಕ್ಕಳು ಅವರು ರಾಮಕ್ಕ , ಹನುಮಕ್ಕ , ಮತ್ತು ನಾನು. ಹನುಮಕ್ಕ ಪೌವತಿಯಾಗಿರುತ್ತಾಳೆ. ಆಕೆಯ ಗಂಡ ಮತ್ತು ಮಕ್ಕಳು ಇರುವುದಿಲ್ಲ ಆಕೆ ಸುಮಾರು 15 ವರ್ಷಗಳ ಹಿಂದೆ ಪೌವತಿಯಾಗಿರುತ್ತಾಳೆ. ನನ್ನ ತಂದೆ ಸಹ ಪೌವತಿಯಾಗಿರುತ್ತಾರೆ ಯಾವ ವರ್ಷದಲ್ಲಿ ಪೌವತಿಯಾದ ಬಗ್ಗೆ ನನಗೆ ಮಾಹಿತಿ ಇಲ್ಲ. ಮೊದಲು ನನ್ನ ತಾಯಿ ಪೌವತಿಯಾದ ನಂತರ ನನ್ನ ತಂದೆ ಪೌವತಿಯಾಗಿರುತ್ತಾರೆ.

ನನ್ನ ತಾಯಿ ಹೆಸರಿನಲ್ಲಿ ಯಾವ ಯಾವ ಆಸ್ತಿಗಳು ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತು ಹೊರತುಪಡಿಸಿ ನನ್ನ ತಾಯಿಗೆ ಬೇರೆ ಆಸ್ತಿಗಳು ಇರಲಿಲ್ಲ. ದಾವಾ ಸ್ವತ್ತು ನನ್ನ ತಾಯಿಗೆ ಪರಸನಭೋವಿ ಎನ್ನುವವರು ಅರಿಶಿನ ಕುಂಕಮಕ್ಕೆ ವಾಗಿ ಕೊಟ್ಟಿರುತ್ತಾರೆ. ಆ ರೀತಿ ದಾವಾ ಸ್ವತ್ತು ಕೊಟ್ಟ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ. ದಾವಾ ಸರ್ವೆ ನಂಬರ್ ಒಟ್ಟು 2 ಎಕರೆ 4 ಗುಂಟೆ ಇರುತ್ತದೆ ಅದಕ್ಕೆ ಚಕ್ಕುಬಂದಿ ಪೂ- ಬೀಮಣ್ಣನವರ ಜಮೀನು , ಪ- ಸರ್ಕಾರಿ ಹಳ್ಳ , ಉ- ಬೀಮಣ್ಣನ ಜಮೀನು , ದ- ಗೌರೀಬಿದನೂರು ರಸ್ತೆ.

ನನ್ನ ತಾಯಿ ಪೌವತಿಯಾದ ನಂತರ ನನ್ನ ಹೆಸರಿಗೆ ಖಾತೆ ಪಹಣಿ ಆಗಿರುವುದಿಲ್ಲ ನನ್ನ ತಾಯಿ ರಾಮಕ್ಕ ಮತ್ತು ಪರಸನಭೋವಿ ರವರ ಹೆಸರಿನಲ್ಲಿ ಖಾತೆ ಇದೆ. ದಾವಾ ಸ್ವತ್ತು ಮುಂಚಿತವಾಗಿ ಯಾರಿಗೆ ಸೇರಿತ್ತು ಎಂದರೆ ಮುಂಚೆನೂ ಸಹ ಪರಸನಭೋವಿಗೆ ಸೇರಿತ್ತು ಈಗಲೂ ಸಹ ಆತನಿಗೆ ಸೇರಿದೆ. ನನ್ನ ತಾಯಿ ಪೌವತಿಯಾದ ನಂತರ ನನ್ನ ತಂದೆ ಹಸೆರಿನಲ್ಲಿ ದಾವಾ ಸ್ವತ್ತಿನ ಖಾತೆ ಆಗಿರುವುದಿಲ್ಲ.

ದಾವಾ ಸ್ವತ್ತು ಭೂ ಪರಿವರ್ತನೆ ಆಗಿದೆ ಎಂದರೆ ಸರಿಯಲ್ಲ. ನಾನು ನಿಪಿ-10 ರ ಅನ್ವಯ ನ್ಯಾಯಾಲಯದ ಮುಂದೆ ದಾವಾ ಸ್ವತ್ತು ನನ್ನ ತಾಯಿ ಹೆಸರಿನಲ್ಲಿ ಭೂ ಪರಿರ್ವತನೆ ಆದ ಬಗ್ಗೆ ದಾಖಲೆಯನ್ನು ಸಲ್ಲಿಸಿಲ್ಲ. ನನ್ನ ತಾಯಿ ಜೀವಂತ ಇರುವ ಕಾಲದಲ್ಲಿ ದಾವಾ ಸ್ವತ್ತು ಭೂ ಪರಿವರ್ತನೆ ಆಗಿ ಅದರಲ್ಲಿ ನಿವೇಶನಗಳು ಸಹ ಆಗಿರುತ್ತವೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡುವ ಕಾಲಕ್ಕೆ ದಾವಾ ಸ್ವತ್ತಿನ ಖಾತೆ ಪಹಣಿ ನನ್ನ ತಾಯಿ ಹೆಸರಿನಲ್ಲಿ ಬರುತ್ತಾ ಇದೆ. ಗಂಗಪ್ಪ ಕೃಷಿ ಇಲಾಖೆ ರವರು ನನಗೆ ಪರಿಚಯ ಇಲ್ಲ. ರಾೀ ದಾವೆಯನ್ನು ನಾನು ಪ್ರತಿವಾದಿಯ ವಿರುದದ ಅವರು ಒಂದು ದಿನ ಬಂದು ದಾವಾ ಸ್ವತ್ತು ಅವರಿಗೆ ಸೇರಿದ್ದು ಎಂದು ಹೇಳಿದ್ದಕ್ಕೆ ದಾವೆ ಹೂಡಿರುತ್ತೇನೆ. ಈ ದಾವೆಯನ್ನು ಹೂಡಲು ನಾನೇ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ , ವಾದ ಪತ್ರದಲ್ಲಿ ಬರೆಸಿರುವ ಅಂಶಗಳು ಸತ್ಯವಾಗಿರುತ್ತವೆ.

ದಿ. 23/12/1993 ರಂದು ದಾವಾ ಸ್ವತ್ತುಗಳನ್ನು ಭೂ ಪರಿವರ್ತನೆ ಮಾಡಿ ಅದರಲ್ಲಿ ನಿವೇಶನ ಮಾಡಿ ಮಾರಾಟ ಮಾಡಲು ಪ್ರತಿವಾದಿ ಹೆಸರಿನಲ್ಲಿ ಮುಕ್ತಿಯಾರ್ ನಾಮೆಯನ್ನು ಬರೆದುಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಮುಕ್ತಿಯಾರ್ ನಾಮೆಯ ಅನ್ವಯ ಪ್ರತಿವಾದಿ ನಿವೇಶನಗಳನ್ನು ನನ್ನ ತಾಯಿ ಪರವಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದರುಅದೇ ರೀತಿ ನನ್ನ ತಂದೆ ಸಹ ಸಹಿ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದರು ಎಂದು ನುಡಿಯುತ್ತಾರೆ.

ಪ್ರತಿವಾದಿಯ ಹೆಸರಿನಲ್ಲಿ ಮುಕ್ತಿಯಾರ್ ನಮೆ ಇದ್ದು ಆತನು ಮಾರಾಟ ಮಾಡಿರುವ ಪತ್ರಗಳ ಮೇಲೆ ನನ್ನ ತಂದೆ ಮತ್ತು ತಾಯಿ ತಮ್ಮ ಹೆಬ್ಬೆಟಿನ ಗುರುತುಗಳನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಿವೇಶನಗಳನ್ನು ಮಾರಾಟ ಮಾಡಿ ಬಂದಂತಹ ಹಣವನ್ನು ನನ್ನ ತಾಯಿ ಪಡೆದುಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ತಾಯಿ ಜೀವಂತ ಇರುವ ಕಾಲದಲ್ಲಿ ನನ್ನ ತಾಯಿ ಮತ್ತು ಪ್ರತಿವಾದಿಯ ನಡುವೆ ದಾವಾ ಸ್ವತ್ತಿನ ವಿರುದ್ಧ ಯಾವುದೇ ತಕರಾರು ಇರಲಿಲ್ಲ. ನನ್ನ ತಾಯಿ ಜೀವಂತ ಇರುವ ಕಾಲಕ್ಕೆ ಪ್ರತಿವಾದಿ ಹೆಸರಿನಲ್ಲಿ ಬರೆದುಕೊಟ್ಟಿರುವ ಮುಕ್ತಿಯಾರ್ ನಾಮೆಯನ್ನು ರದ್ದುಪಡಿಸಲು ಆಗಲೀ ಮತ್ತು ಸದರಿ ಮುಕ್ತಿಯಾರ್ ನಾಮೆಯನ್ನು ದುರುಪಯೋಗಪಡಿಸಿದ ಬಗ್ಗೆ ಯಾವುದೇ ದೂರನ್ನು ಸಹ ಸಲ್ಲಿಸಿರುವುದಿಲ್ಲ. ನಾನು ಇಂದಿನವರೆಗೆ ಸಬ್ ರಿಜಿಸ್ಟರ್ ಕಚೇರಿಗೆ ಹೋಗಿ ದಾವಾ ಸ್ವತ್ತು ಗಳಲ್ಲಿ ನಿವೇಶನಗಳು ಮಾರಾಟ ಆಗಿರುವ ಬಗ್ಗೆ ಕೇಳಿ ತಿಳಿದುಕೊಂಡಿಲ್ಲ.

ಬೀಮರಾಜು ರವರು 1999 ರಲ್ಲಿ ಮುಕ್ತಿಯಾರ್ ನಾಮೆಯ ಅನ್ವಯ ಕೊನೆಯ ಆಸ್ತಿಯ ವ್ಯವಹಾರವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮುಕ್ತಿಯಾರ್ ನಾಮೆಯ ಅನ್ವಯ ಮಾರಾಟ ಮಾಡಿರುವ ನಿವೇಶನಗಳಲ್ಲಿ ಈಗ ಕೊಂಡುಕೊಂಡಿರುವ ವ್ಯಕ್ತಿಗಳು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮುಂಚೆ ಭೂ ಪರಿವರ್ತನೆ ಆಗುವ ಕಾಲಕ್ಕೆ ಬಿಜವಾರ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರಿತ್ತು. ಈಗ ಸದರಿ ದಾವಾ ಸ್ವತ್ತಿನಲ್ಲಿ ನಿವೇಶನಗಳು ಆಗಿ

ಮಧುಗಿರಿಯ ಮುನ್ಸಿಪಾಲ್ಟಿಯ ವ್ಯಾಪ್ತಿಗೆ ಬರುತ್ತಿದೆ. ಪ್ರತಿವಾದಿ ನನ್ನ ತಾಯಿ ಬರೆದುಕೊಟ್ಟ ಮುಕ್ತಿಯಾರ್ ನಾಮೆಯ ಅನ್ವಯ ಲಕ್ಷ್ಮೀದೇವಮ್ಮ , ಗಂಗಮ್ಮ , ದೊಡಣ್ಣ , ನಾಗರಾಜು , ಅನ್ನಪೂರ್ಣ , ಗಾಯಿತ್ರಿ ಆರಾಧ್ಯ , ಪವಿತ್ರ ಪ್ರಕಾಶ್ , ಸ್ವರೂಪ್ ರಾಜ್ , ಅಶ್ವಾಲಾ , ದೇವರಾಜಪ್ಪ , ರಾಮಚಂದ್ರಪ್ಪ , ರವಿಕುಮಾರ್ , ಮಂಜುಳಮೂರ್ತಿ , ಪಾರ್ವತಮ್ಮ , ಸುಬ್ಬಣ್ಣ , ಅನಿತಾ , ಕವಿತಾ ಮತ್ತು ಇನ್ನಿತರರಿಗೆ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿಯವರು ಕ್ರಯಕ್ಕೆ ನಿವೇಶನಗಳನ್ನು ಪಡೆದುಕೊಂಡ ನಂತರ ಅವರ ಹೆಸರಿಗೆ ಮುನ್ಸಿಪಾಲಿಸ್ಟಿರವರು ಖಾತೆ ಸಹ ಮಾಡಿಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ಈಗ ಸದರಿ ನಿವೇಶನಗಳನು ಅವರವರ ಸ್ವಾಧೀನಾನುಭವದಲ್ಲಿವೆ ಎಂದರೆ ಸಾಕ್ಷಿ ನಮ್ಮ ಸ್ವಾಧೀನಾನುಭವದಲ್ಲಿವೆ ಎಂದು ನುಡಿಯುತ್ತಾರೆ. ನನ್ನ ಸ್ವಾಧೀನಾನುಭದಲ್ಲಿ ನಿವೇಶನಗಳು ಇದ್ದ ಬಗೆ ತೋರಿಸಲು ನಾನು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಾನು ದಾವೆಯನ್ನು ಹೂಡುವ ಕಾಲಕ್ಕೆ ದಾವಾ ಸ್ವತ್ತಿನಲ್ದಿ ಯಾವುದೇ ಉಳುಮೆಯನ್ನು ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತಿನ ಬೆಲೆ 10 ಲಕ್ಷ ಇತ್ತು ಎಂದರೆ ಸಾಕ್ಷಿ ಅದಕ್ಕಿಂತ ಕಡಿಮೆ ಇತ್ತು ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದ ಮುಂದೆ ಸಲ್ಲಿಸಿರುವ ಛಾಯ ಚಿತ್ರ ಗಳು ಭೂ ಪರಿವರ್ತನೆ ಆಗುವ ಮುಂಚಿತ ಕಾಲದಲ್ಲಿ ತಗೆಗೆದಿರು ಛಾಯ

ಚಿತ್ರ ಗಳು ಆಗಿರುತ್ತವೆ ಎಂದರೆ ಸರಿಯಲ್ಲ ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಅಧಿಕಾರ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಮತ್ತು ತಾಯಿ ಈ ಹಿಂದೆ ದಾವಾ ಸ್ವತ್ತಿನಲ್ಲಿ ನಿವೇಶನಗಳನ್ನು ಮಾರಾಟ ಮಾಡಿ ಹಣವನ್ನು ಪಡೆದುಕೊಂಡು ಇನ್ನೂ ಹೆಚ್ಚಿನ ಹಣವನ್ನು ಪ್ರತಿವಾದಿಯ ಕಡೆಯಿಂದ ಪಡೆಯಲು ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಈ ಸುಳ್ಳು ದಾವೆಯನ್ನು ನಾಯಾಲಯದ ಮುಂದೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

(ಅಬ್ದುಲ್ ರಹಿಮಾನ್ ಎ. ಮುಲ್ಲಾ)
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ